ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

## 2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.

### ಸಿ.ಸಿ.ನಂ.575/2023

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಅಂಬಾದಾಸ್** | | |
| **ತಂದೆಃಹೆಸರು** | **ದುರುಗಪ್ಪ** | **ಪಿಡಬ್ಲೂ:** | **9** |
| **ವಯಸ್ಸು** | **56 ವರ್ಷ** | **ಸಿಡಬ್ಲೂ:** | **11** |
| **ಉದ್ಯೋಗಃ** | **ಎ. ಎಸ್. ಐ.** | | |
| **ವಾಸ ಸ್ಥಳಃ** | **ಸಂಚಾರಿ ಪೋಲೀಸ್ ಠಾಣೆ, ಸಿಂಧನೂರು.** | | |

**ದಿನಾಂಕ 04-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ**

ಈ ದಿನ ನ್ಯಾಯಾಲಯದಲ್ಲಿ 2 ರಿಂದ 4 ನೇ ಆರೋಪಿತರು ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಕಲಂ 317 ಸಿ.ಆರ್.ಪಿ.ಸಿ. ಅಡಿಯಲ್ಲಿ ಅರ್ಜಿಯನ್ನು ದಾಖಲಿಸಿ, ಗುರುತಿಸುವ ವಿಚಾರದಲ್ಲಿ ತಕರಾರು ಇಲ್ಲ ಎಂದು ನುಡಿದಿದ್ದರಿಂದ, ಈ ಕೆಳಕಂಡಂತೆ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು.

ನಾನು ದಿ.01-06-2022 ರಿಂದ ಅಕ್ಟೋಬರ್ 2023 ರವರೆಗೆ ಸಿಂಧನೂರು ಗ್ರಾಮಾಂತರ ಠಾಣೆಯಲ್ಲಿ ಮುಖ್ಯಪೇದೆ ಅಂತಾ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕಃ05.11.2022 ರಂದು ನಾನು ಠಾಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಬೆ.11 ಗಂಟೆಗೆ ಸಮಯದಲ್ಲಿ ದೂರುದಾರರು ಠಾಣೆಗೆ ಹಾಜರಾಗಿ, ಗಣಕೀಕೃತ ದೂರನ್ನು ತಂದು

ಹಾಜರುಪಡಿಸಿದ್ದು,  ಸದರಿ ದೂರಿನ ಆಧಾರದ ಮೇಲೆ ಠಾಣಾ ಮೊಕದ್ದಮೆ ಸಂಖ್ಯೆ 207/2022 ಪ್ರಕರಣವನ್ನು ಕಲಂ.323, 324, 354, 504, 506 ಸಹವಾಚಕ 34 ಭಾ.ದಂ.ಸಂ. ಅಡಿಯಲ್ಲಿ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ಮಾನ್ಯ ಘನ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಯವರಿಗೆ ಸಲ್ಲಿಸಿರುತ್ತೇನೆ. ಸಾಕ್ಷಿಯು ನಿಪಿ-1 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಪ್ರಥಮ ವರ್ತಮಾನ ವರದಿಯನ್ನು  ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ ಕಾರಣ ಪ್ರಥಮ ವರ್ತಮಾನ ವರದಿಯನ್ನು ನಿ.ಪಿ.4, ಸಾಕ್ಷಿಯ ಸಹಿಯನ್ನು ನಿ.ಪಿ.4(ಎ) ಎಂದು ಗುರುತಿಸಲಾಯಿತು.

ಅದೇ ದಿನ ಸಂ.4 ಗಂಟೆಗೆ ಗುನ್ನಾ ಸ್ಥಳಕ್ಕೆ ಹೋಗಿ, ಚಾಸಾ-5 ರವರು ತೋರಿಸಿದ ಸ್ಥಳದಲ್ಲಿ ಪಂಚರಾದ ಚಾಸಾ-2 & 3 ರವರ ಸಮಕ್ಷಮ ನಿಪಿ-2 ಪಂಚನಾಮೆ ಮಾಡಿ, ಒಂದು ಕುಡುಗೋಲನ್ನು ವಶಕ್ಕೆ ಪಡೆದಿರುತ್ತೇನೆ & ಆ ಕಾಲಕ್ಕೆ ಭಾವಚಿತ್ರಗಳನ್ನು ತೆಗೆಸಿರುತ್ತೇನೆ. ನಿಪಿ-2 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-2 ಡಿ ಎಂದು ಗುರುತಿಸಲಾಯಿತು.  ಆ ಕಾಲಕ್ಕೆ ಸ್ವತ್ತುಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸ್ವತ್ತುಪಟ್ಟಿಯನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5 ಎ ಎಂದು ಗುರುತಿಸಲಾಯಿತು. ಸಾಕ್ಷಿಯು 4 ಫೋಟೋಗಳನ್ನು & ಕಲಂ.65 ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-6 ರಿಂದ 10 ಎಂದು, ನಿಪಿ-10 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-10 ಎ ಎಂದು ಗುರುತಿಸಲಾಯಿತು.

ಬಾಲಪ್ಪ ರವರ ಹೇಳಿಕೆಯಲ್ಲಿ ವಯಸ್ಸು 60 ಎಂದು ತಪ್ಪಾಗಿದ್ದು, ಅದು 62 ಆಗಬೇಕಿದೆ.  ಬುಡ್ಡಪ್ಪ ತಂದೆ ನರಸಪ್ಪ ಎಂದು ಹೇಳಿಕೆಯಲ್ಲಿ & ಸಾಕ್ಷಿದಾರರ ಪಟ್ಟಿಯಲ್ಲಿ ನಮೂದಾಗಬೇಕಿತ್ತು, ಆದರೆ ಅದು ಬುಡ್ಡಪ್ಪ ತಂದೆ ಈರಪ್ಪ ಎಂದು ತಪ್ಪಾಗಿ ನಮೂದಾಗಿರುತ್ತದೆ. ಆದ್ದರಿಂದ ನ್ಯಾಯಾಲಯಕ್ಕೆ 3 ಮನವಿ ಪತ್ರಗಳನ್ನು ಕೊಟ್ಟಿರುತ್ತೇನೆ.

ಆರೋಪಿತರು ಖುದ್ದಾಗಿ ಠಾಣೆಗೆ ಹಾಜರಾಗಿ, ನ್ಯಾಯಾಲಯದಿಂದ ಪಡೆದ ಜಾಮೀನಿನ ಪ್ರತಿಯನ್ನು ತಂದು ನನ್ನ ಮುಂದೆ ಹಾಜರುಪಡಿಸಿದ್ದು, ಅವರ ವಿರುದ್ಧ ದಸ್ತಗಿರಿ ಕ್ರಮ ಅನುಸರಿಸಿ, ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ.

ನಂತರ ಚಾಸಾ-1, 4 ರಿಂದ 9 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ.  ನಂತರ ಮುಂದಿನ ತನಿಖೆಯನ್ನು ಚಾಸಾ-12 ರವರಿಗೆ ವಹಿಸಿಕೊಟ್ಟಿರುತ್ತೇನೆ.

**<u>ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದಃ</u>**

1. ಘಟನಾ ಸ್ಥಳದ ಅಕ್ಕಪಕ್ಕದ ಜಮೀನಿನವರಾದ ಶೇಖರಯ್ಯ ಸ್ವಾಮಿ, ಬಸಪ್ಪ, ಅಂಬಣ್ಣ, ವೀರೇಶ, ಶಿವಣ್ಣ & ದುರುಗಪ್ಪರವರ ಹೇಳಿಕೆ ಪಡೆದಿಲ್ಲ. ಚಾಸಾ-1, 4 ರಿಂದ 7 ರವರು ಘಟನಾ ದಿನ ಠಾಣೆಗೆ ಬಂದಿಲ್ಲ ಎಂದರೆ ಸರಿ.

2. ಚಾಸಾ-5 ರವರ ರಕ್ತ ಹತ್ತಿದ ಬಟ್ಟೆಯನ್ನು ನಾನು ವಶಕ್ಕೆ ಪಡೆದಿಲ್ಲ. ರಕ್ತ ಬಿದ್ದಿದ್ದ ಮಣ್ಣನ್ನು ನಾನು ಜಪ್ತುಪಡಿಸಿಕೊಂಡಿಲ್ಲ. ಚಾಸಾ-4 ರಿಂದ 7 ರವರ ಹೇಳಿಕೆಗಳನ್ನು ಸಂಜೆ 6 ಗಂಟೆಗೆ ಠಾಣೆಯಲ್ಲಿ ಪಡೆದಿದ್ದೆ. ಚಾಸಾ-4 ರವರು ತಮ್ಮ ಹೇಳಿಕೆಯಲ್ಲಿ ಸರ್ವೆ ನಂಬರನ್ನು ಹೇಳಿರುವುದಿಲ್ಲ. ಅದೇ ರೀತಿಯಾಗಿ ವೀರೇಶಪ್ಪನು ಆರೋಪಿತರಿಗೆ ನೀರು ಏಕೆ ಬಿಡಬೇಕು ಎಂದು ಹೇಳಿದ್ದಾರೆಯೇ ಎಂದರೆ ಸರಿ. ಹಾಗೂ ಹನುಮಂತಪ್ಪನ ಎದೆಯ ಮೇಲಿನ ಅಂಗಿ ಹಿಡಿದು ಎಳೆದಾಡಿದ & ಕುಡುಗೋಲಿನಿಂದ ಹೊಡೆಯಲು ಬಂದರು ಎಂದು, ಚಾಸಾ-5 ರವರ ಕೈ ಬೆರಳಿಗೆ ಗಾಯವಾದ ಬಗ್ಗೆ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. 2 ರಿಂದ 4 ನೇ ಆರೋಪಿತರು ಚಾಸಾ-1 ರವರ ಸೀರೆ ಹಿಡಿದು ಎಳೆದಾಡಿದ ಬಗ್ಗೆ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ.

3. ಗಾಯಾಳು ರೆಡ್ಡೆಪ್ಪರವರನ್ನು ನಾವು ಆಸ್ಪತ್ರೆಗೆ ಹೋಗಿ ವಿಚಾರಣೆ ಮಾಡಿದ್ದೆವು. ನಾನು ದಿ.05-11-2022 ರಂದು ಸಂ.7 ಗಂಟೆಗೆ ವಿಚಾರಣೆ ಮಾಡಿದ್ದೆ. ಆ ಕಾಲಕ್ಕೆ ಆತನ ಸಹಿ ಪಡೆದಿರುತ್ತೀರಾ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ಆರೋಪಿತರು ನನ್ನ ಅಣ್ಣನೊಂದಿಗೆ ಜಗಳ ತೆಗೆದಿದ್ದರು ಎಂದು ಚಾಸಾ-5 ರವರ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ. 4 ನೇ ಆರೋಪಿ ತನ್ನ ಕೈಯಲ್ಲಿದ್ದ ಕುಡುಗೋಲಿನಿಂದ ತನ್ನ ಕಿರುಬೆರಳಿಗೆ ಹೊಡೆದ ಎಂದು ತಮ್ಮ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ.

4. ನಿಪಿ-3 & 4 ರಂತೆ ನನ್ನ ಮುಂದೆ ಹೇಳಿದ್ದರು ಎಂದರೆ ಸರಿ. ನೀವು ಯಾವುದೇ ದೂರನ್ನು ಪಡೆದಿಲ್ಲ, ಯಾವುದೇ ಸ್ಥಳಕ್ಕೆ ಹೋಗಿ ಪಂಚನಾಮೆ ಮಾಡಿಲ್ಲ, ಮು. ಮಾ. ನ್ನು ಜಪ್ತು ಪಡಿಸಿಕೊಂಡಿಲ್ಲ ಎಂದರೆ ಸರಿ. ಫೋಟೋವನ್ನು ತೆಗೆದ ಸಾಧನದ ಬಗ್ಗೆ ನಿಮ್ಮ ಪಂಚನಾಮೆಯಲ್ಲಿ ದಾಖಲೆ ಸಲ್ಲಿಸಿಲ್ಲ ಎಂದರೆ ಸರಿ. ಸದರಿ ನಿಪಿ-6 ರಿಂದ 9 ಫೋಟೋಗಳನ್ನು ಯಾವ ಸ್ಟುಡಿಯೋದಲ್ಲಿ ಪ್ರಿಂಟ್ ಹಾಕಿಸಿದ್ದಿರಿ ಎಂದರೆ ನನಗೆ ನೆನಪಿಲ್ಲ.

5. ಚಾಸಾ-1 ರವರು ಈ ಪ್ರಕರಣದಲ್ಲಿ ದೂರನ್ನು ಸಲ್ಲಿಸುವುದಕ್ಕಿಂತ ಮುಂಚೆ ಈ ಪ್ರಕರಣದ ಆರೋಪಿತರು ಚಾಸಾ-1 ರವರ ವಿರುದ್ಧ ಕಲಂ.206/2022 ದಾಖಲಿಸಿದ್ದರು ಎಂದರೆ ಸರಿ.

6. ಆರೋಪಿತರು ಯಾವುದೇ ತಪ್ಪು ಮಾಡದೇ ಇದ್ದರೂ, ಚಾಸಾ-1 ರವರ ಮಾತು ಕೇಳಿ, ಅವರಿಗೆ ಸಹಾಯ ಮಾಡಲು ಸುಳ್ಳು ದೂರು ದಾಖಲಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ.

7. ಈ ದಿನ ನೀವು ನ್ಯಾಯಾಲಯಕ್ಕೆ ಕೊಟ್ಟಿರುವ ಮನವಿಗಳನ್ನು ಮುಂದುವರೆದ ತನಿಖೆ ಮಾಡಿ ಕೊಟ್ಟಿರುತ್ತೀರಾ ಎಂದರೆ ಸರಿಯಲ್ಲ. ಸದರಿಯವರ ಆಧಾರ್ ಕಾರ್ಡ್‌ಗಳನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**C/c 2 ನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಸಿಂಧನೂರು.**